
# ಹೆಚ್.ಎಸ್.ಆರ್. ಬಡಾವಣೆ ಬ್ರಾಹ್ಮಣ ಸಂಘ (ರಿ)
## H.S.R. BADAVANE BRAHMANA SANGHA (R)


(SOR/BLU/DR/816/2009-10/31-10-2009)



# 56, 4th Floor, "Gayathri Bhavan", 31st Main, 18th Cross, Sector-II, HSR LAYOUT, BANGALORE-560102

www.hsrvipra.co.in ♦ email: hsr.brahmana@yahoo.com



|| ಶಂಕರಂ ಶಂಕರಾಚಾರ್ಯಂ ಶೇಷಂ ರಾಮಾನುಜಂ ಮುನಿಮ್ | ವಾಯುಂ ಚ ಮಧ್ವಮಾಚಾರ್ಯಂ ಆಚಾರ್ಯತ್ರಯಮಾಶ್ರಯೇ ||

# ವಿಪ್ರಬಂಧು


ತ್ರೈಮಾಸಿಕ ಪತ್ರಿಕೆ – ಸಂಚಿಕೆ 20 – ಪುಟಗಳು 16

ಶ್ರೀ ವಿಶ್ವಾವಸು ಸಂವತ್ಸರ | ಶರದ್ ಋತು | ಅಕ್ಟೋಬರ್ 2025






ವಿಜಯದಶಮಿ, ದೀಪಾವಳಿ ಮತ್ತು ಕನ್ನಡ ರಾಜ್ಯೋತ್ಸವದ ಶುಭಾಶಯಗಳು

BOOK-POST

With Best Compliments from:







## SHASTRY'S BAKERY AND SWEETS

## ಶಾಸ್ತ್ರೀಸ್ ಬೇಕರಿ ಮತ್ತು ಸಿಹಿ ತಿಂಡಿಗಳು

# 714/2, 7th Block, K.R. Road, Jayanagar, Bangalore - 560 070




ಸಾರ್ವಜನಿಕರಿಗೆ 33 ವರ್ಷಗಳಿಂದ ಶುದ್ಧ ಪದಾರ್ಥಗಳ ಅವಿರತ ಸೇವೆ. ಎಲ್ಲಾ ಶುಭ ಸಮಾರಂಭಗಳಿಗೆ ಶುದ್ಧವಾಗಿ, ರುಚಿಯಾಗಿ ಬೇಕರಿ ಹಾಗೂ ಸಿಹಿ ತಿನಿಸುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಅವಶ್ಯಕತೆಗೆ ಅನುಗುಣವಾಗಿ ತಮ್ಮಲ್ಲಿಗೆ ತಲುಪಿಸಲಾಗುತ್ತದೆ.

ಪ್ರೊ : ಸಂತೇಶಿವರ ಜಯರಾಮು ಮತ್ತು ಸಹೋದರರು

ದೂರವಾಣಿ : 2676 4599

94486 85061, 94803 91152

99869 28281

*With Best Compliments From*

DOCTOR

SERVING the humanity since 29 years......

# RAKSHIT HEALTH AND COUNSELLING CENTER

" Certified Diabetes Counsellors "

1. #7, (76/1), 7th Cross, 27th Main, 1st Sector, HSR Layout, BANGALORE-560 102
2. #30/1, Munireddy Complex, Mangammanapalya Main Road, Yellukunte, HSR III rd Sector, BANGALORE-560 068.

**Dr. B.S. LAKSHMI**
BAMS (Ay), BAMS (Integrated)
CNCC (Childcare and Nutrition)
Mobile: 98455 18758

Winner of
GLOBAL HEALTH CARE
EXCELLENCE
AWARD 2013

**Dr. AMARNATH T.S.**
BSAM (Ay), BAMS (Integrated)
PGDHR (Human Rights)
EMBA (Marketing)
Mobile: 98452 59809

## EXECUTIVE COMMITTEE MEMBERS

| | |
|---|---|
| ***PRESIDENT*** | |
| Ramesh. A | 90084 58078 |
| ***VICE-PRESIDENTS*** | |
| Narasimhiah. V | 94490 28618 |
| Prabhakar. H.C | 98860 35210 |
| ***SECRETARY*** | |
| Narasimha Murthy. A.R | 98445 68839 |
| ***TREASURER*** | |
| Ajeya Krishna. KR | 99800 10021 |
| ***JOINT SECRETARIES*** | |
| Dr. Shyam Sundar. G | 94480 32645 |
| Ananta. M.S | 99868 25761 |
| Raghunanath. N | 9880719764 |
| Govindaraja Achar. G.S. | 98802 98031 |
| ***EC MEMBERS*** | |
| Anantha Ramu. S | 99800 10021 |
| Srinivasa. S. V | 7090709946 |
| Gururaja Rao. S | 94480 19249 |
| Harishkumar. K. R | 98801 70113 |
| Kousalendra | 94814 87304 |
| Subramanya. H. C | 99024 83415 |
| Chethan. N | 98805 09396 |
| SKLN Prasanna | 98863 94463 |
| Raghavendra. R | 94485 58482 |
| Sindhu Priyadarshini | 98806 86492 |
| Divya Vinay | 96110 80044 |
| ***ADVISORS*** | |
| Ramaswamy | 99099 48237 |
| Balaprabha Karanth | 99458 02609 |
| Krishna Murthy | 99809 22776 |
| Manoj Karantha | 88804 43064 |
| Mohan Kumar | 94484 80472 |
| Natesh G S | 94487 77770 |
| Sridhara Rao | 96322 11611 |
| Subbaramaiah C N | 94481 89695 |
| Sudhindra Bhat (Legal) | 98451 03951 |
| Murali V R (Auditor) | 98440 33971 |


### Viprabandhu Editorial Committee

| | |
|---|---|
| Sridhar Rao H. | 9632211611 |
| Nagalakshmi | 9741044599 |
| Natesh G.S. | 9448777770 |
| Narasimhaiah V. | 9449028618 |

hsr.viprabandhu@gmail.com


# ಅಧ್ಯಕ್ಷರ ನುಡಿ

ಹೆಚ್.ಎಸ್.ಆರ್ ಬಡಾವಣೆ ಬ್ರಾಹ್ಮಣಸಂಘದ ಎಲ್ಲಾ ವಿಪ್ರರಿಗೂ ಅನಂತ ನಮಸ್ಕಾರಗಳು. ತಾವೆಲ್ಲರೂ ದಿನಾಂಕ 7/ 0 9 / 2025 ರಂದು ನಡೆದ ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಿರುವುದು ಸರಿಯಷ್ಟೇ. ಆ ಸಭೆಯಲ್ಲಿ ತಿಳಿಸಿದಂತೆ ಆತ್ಮ ಸಂತೋಷದಿಂದ ಸತತವಾಗಿ ಮೂರು ಬಾರಿ ಅಧ್ಯಕ್ಷ ಸ್ಥಾನವನ್ನು ನಿರ್ವಹಿಸಿರುವುದಕ್ಕೆ ತಾವು ನೀಡಿರುವ ಸಂಪೂರ್ಣ ಸಹಕಾರವನ್ನು ಮರೆಯುವಂತಿಲ್ಲ.

ಈ ಅವಧಿಯಲ್ಲಿ ಸಂಘವು ಹಂತ ಹಂತವಾಗಿ ಅನೇಕ ಚಟುವಟಿಕೆಗಳಿಂದ ಸ್ಫೂರ್ತಿ ಪಡೆದು ಸದಸ್ಯರನ್ನು ತನ್ನತ್ತ ಆಕರ್ಷಿಸಿದೆ. ಇದಕ್ಕೆ ಕಾರ್ಯಕಾರಿಣಿ ಸದಸ್ಯರೆಲ್ಲರೂ ಒಗ್ಗಟ್ಟಿನಿಂದ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿರುವುದೇ ಸಾಕ್ಷಿಯಾಗಿದೆ.

ನೂತನ ಸಂಘದ ಕಾರ್ಯಕಾರಿಣಿ ಸಭೆಯಲ್ಲಿ ನನ್ನ ಸಹಸದಸ್ಯರೆಲ್ಲರೂ ನಾನು ಅಧ್ಯಕ್ಷನಾಗಿ ಮುಂದುವರೆಯಲು ಅಪೇಕ್ಷೆಯನ್ನು ವ್ಯಕ್ತಪಡಿಸಿದಿರಿ. ಬದಲಾವಣೆ ಅಗತ್ಯ ಹಾಗೂ ಸಂಘವು ಹೊಸ ಹೊಸ ಚಿಂತನೆಗಳನ್ನು ಪಡೆಯುವ ಅನಿವಾರ್ಯಗಳು ಸರ್ವೇ ಸಾಮಾನ್ಯವಾಗಿರುವುದರಿಂದ ನಾನು ಆ ಸ್ಥಾನವನ್ನು ತೆರವುಗೊಳಿಸಿರುವೆ. ಶ್ರೀ ಅನಂತಕೃಷ್ಣ ರಮೇಶ್ ರವರು ಅಧ್ಯಕ್ಷರಾಗಿ ಸಭೆಯಲ್ಲಿ ಮುಂದಿನ ಮೂರು ವರ್ಷಗಳಿಗೆ ಆರಿಸಲ್ಪಟ್ಟಿರುವರು. ನೂತನ ಅಧ್ಯಕ್ಷರಾದ ಶ್ರೀಯುತರಿಗೆ ನನ್ನ ಬೆಂಬಲ ನಿರಂತರವಾಗಿರುತ್ತದೆಂದು, ಉತ್ತಮವಾಗಿ ಕಾರ್ಯನಿರ್ವಹಿಸುವ ಶಕ್ತಿಯನ್ನು ನಿಮ್ಮೆಲ್ಲರ ಸಹಕಾರದೊಡನೆ ಭಗವಂತ ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ. ವಿವಿಧ ಸಂಘ ಸಂಸ್ಥೆಗಳಲ್ಲಿ ದೊಡ್ಡ ಮಟ್ಟದ ಕಾರ್ಯಾನುಭವ ಹೊಂದಿರುವ ಶ್ರೀ ಎ. ಆರ್. ನರಸಿಂಹಮೂರ್ತಿಯವರು ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆಯ್ಕೆ ಹೊಂದಿರುವುದು ಸಂಘವು ಇನ್ನೂ ಹೆಚ್ಚಿನ ಬಲಪಡೆಯುವುದರಲ್ಲಿ ಸಂಶಯವಿರುವುದಿಲ್ಲ. ಇವರಿಗೂ ನಮ್ಮೆಲ್ಲರ ನಿರಂತರ ಸಹಕಾರವಿರಲಿದೆ. ಸಂಘವು ಇನ್ನೂ ಉನ್ನತ ಮಟ್ಟ ಪಡೆಯಲೆಂದು ಆಶಿಸುತ್ತೇನೆ. ಉಪಾಧ್ಯಕ್ಷರುಗಳಾಗಿ ಆಯ್ಕೆಯಾಗಿರುವ ಶ್ರೀ ಹೆಚ್.ಸಿ. ಪ್ರಭಾಕರ್ ಹಾಗೂ ಶ್ರೀ ವಿ. ನರಸಿಂಹಯ್ಯನವರಿಗೂ ಹಾಗೂ ಖಜಾಂಚಿಯಾಗಿ ಆಯ್ಕೆಯಾಗಿರುವ ಶ್ರೀ ಅಜೇಯಕೃಷ್ಣ. ಕೆ.ಆರ್.ರವರಿಗೂ ಅಭಿನಂದನೆಗಳು. ಎಲ್ಲಾ ಕಾರ್ಯಕಾರಿಣಿ ಸದಸ್ಯರಿಗೂ ಮತ್ತು ಸಲಹೆಗಾರರಿಗೂ ನನ್ನ ಹೃತ್ಪೂರ್ವಕ ಹಾರೈಕೆಗಳು. ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸಿದ ತಮ್ಮೆಲ್ಲರಿಗೂ ಧನ್ಯವಾದಗಳು. ಸಂಘದ ಒತ್ತಾಸೆಗಾಗಿ ಅನುಭವಿ ಸದಸ್ಯರು ಮಾರ್ಗದರ್ಶಕರಾಗಿರುತ್ತಾರೆ. ಸಂಘದ ಜವಾಬ್ದಾರಿಯನ್ನು ನಿರ್ವಹಿಸುವ ನನ್ನೆಲ್ಲ ಸಹಸದಸ್ಯರಿಗೆ ಹೃತ್ಪೂರ್ವಕ ಸ್ವಾಗತವನ್ನು ಕೋರುತ್ತೇನೆ.

"ಸರ್ವೇಜನಾಃ ಸುಖಿನೋಭವಂತು"

**ಅನಂತರಾಮು ಎಸ್.**

**ಅಧ್ಯಕ್ಷರು, ಹೆಚ್.ಎಸ್.ಆರ್. ಬಡಾವಣೆ ಬ್ರಾಹ್ಮಣ ಸಂಘ**

# ಕಾರ್ಯದರ್ಶಿ ವರದಿ

05/07/2025 ರಂದು ಸಾರ್ವಜನಿಕವಾಗಿ ಹೆಚ್.ಎಸ್.ಆರ್.ಬಡಾವಣೆ ಬ್ರಾಹ್ಮಣ ಸಂಘ ಹಾಗೂ ಹೆಚ್.ಎಸ್.ಆರ್ ನ ಆಕ್ಸ್ಫರ್ಡ್ ಕಾಲೇಜಿನ ಸಹಯೋಗದೊಂದಿಗೆ ಉಚಿತ ಬೃಹತ್ ಉದ್ಯೋಗ ಮೇಳವನ್ನು ಕಾಲೇಜಿನಲ್ಲಿ ಆಯೋಜಿಸಲಾಯಿತು. 42 ಕಂಪನಿಗಳು ಪಾಲ್ಗೊಂಡು 1300 ಉದ್ಯೋಗಾಕಾಂಕ್ಷಿಗಳನ್ನು ಸಂದರ್ಶಿಸಿ ನೂರಾರು ಅಭ್ಯರ್ಥಿಗಳಿಗೆ ಉದ್ಯೋಗದ ಅವಕಾಶವನ್ನಿತ್ತದ್ದು ಒಂದು ಸಾಮಾಜಿಕ ಕಳಕಳಿಯ ಕಾರ್ಯಕ್ರಮವಾಗಿತ್ತು.

13/07/2025 ರ ಭಾನುವಾರದಂದು ಎಸ್.ಎಲ್.ಎನ್ ವೇದಪಾಠ ಶಾಲೆಯ ವತಿಯಿಂದ "ಗುರುಪೂರ್ಣಿಮಾ" ಕಾರ್ಯಕ್ರಮವು ನೆರವೇರಿತು. ಕಾರ್ಯದರ್ಶಿ ಶ್ರೀ. ರಮೇಶ್.ಎ ದಂಪತಿಗಳು ಪೂಜೆಯನ್ನು ನೆರವೇರಿಸಿದರು. ವೇದಗುರುಗಳಾದ ವಿದ್ವಾನ್ ಶ್ರೀ. ಕೆ.ಎಸ್. ರಾಮಕೃಷ್ಣ ಭಟ್ ದಂಪತಿಗಳು, ವಿದ್ವಾನ್ ಶ್ರೀ. ಸುಂದರೇಶ್ ಅಯ್ಯರ್ ದಂಪತಿಗಳು ಮತ್ತು ಶ್ರೀ. ರಾಮಚಂದ್ರಶಾಸ್ತ್ರಿ.ಕೆ ದಂಪತಿಗಳನ್ನು ಸನ್ಮಾನಿಸಲಾಯಿತು.

04/08/2025 ರಂದು ಶಾಸಕರಾದ ಶ್ರೀ ಸತೀಶ್ ರೆಡ್ಡಿಯವರು ಕೋಡಿಚಿಕ್ಕನಹಳ್ಳಿಯಲ್ಲಿ ನಿರ್ಮಿಸಿರುವ ಉಚಿತ ಕಲ್ಯಾಣ ಮಂಟಪದ ಪ್ರಾರಂಭೋತ್ಸವಕ್ಕೆ ಸಂಘದವರನ್ನು ಆಹ್ವಾನಿಸಿದ್ದು ಶ್ರೀಯುತರಿಗೆ 2×3 ಅಡಿಯ ಶ್ರೀ ಶ್ರೀನಿವಾಸ ದೇವರ ಫೋಟೋವನ್ನು ಸಂಘದಿಂದ ನೀಡಿ ವೇದಗುರುಗಳು ಆಶೀರ್ವದಿಸಿದರು.

09/08/2025 ರ ಶನಿವಾರದಂದು ಋಗ್ ಮತ್ತು ಯಜುರ್ ಉಪಾಕರ್ಮವನ್ನು ಹೆಚ್.ಎಸ್.ಆರ್ ಸೆಕ್ಟರ್-7 ರ ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ಆಚರಿಸಲಾಯಿತು. ಅಕ್ಷಯ ನಗರದ ಶ್ರೀ ಸುಬ್ರಮಣ್ಯ ಮಠದ ಮ್ಯಾನೇಜರ್ ಆದ ಶ್ರೀ. ಕೃಷ್ಣಪ್ರಸಾದ್ ರವರ ಆಹ್ವಾನದ ಮೇರೆಗೆ, ಮಠದಲ್ಲಿ ದಿನಾಂಕ 10/08/2025 ರಂದು ವೇದಗುರುಗಳ ನೇತೃತ್ವದಲ್ಲಿ ವೇದ ಪಾರಾಯಣವನ್ನು ಜರುಗಿಸಲಾಯಿತು. 15/08/2025 ರಂದು ಬೆಳಿಗ್ಗೆ ಗಾಯತ್ರೀ ಭವನದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. 07/09/2025ರ ಭಾನುವಾರದಂದು ವಿಶೇಷ ಸರ್ವ ಸದಸ್ಯರ ಸಭೆ, 2024-25ನೇ ಆರ್ಥಿಕ ವರ್ಷದ ಸರ್ವ ಸದಸ್ಯರ ಸಭೆ ಹಾಗೂ 2025-28ಕ್ಕೆ ಕಾರ್ಯಕಾರಿಣಿ ಸದಸ್ಯರ ಚುನಾವಣಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲಾಯಿತು. ಇದೇ ಸಂದರ್ಭದಲ್ಲಿ 80 ವರ್ಷ ಪೂರೈಸಿದ ಸಂಘದ ಸದಸ್ಯದಂಪತಿಗಳನ್ನು ಸನ್ಮಾನಿಸಲಾಯಿತು.

ಚುನಾವಣಾ ಪ್ರಕ್ರಿಯೆಯ ನಂತರ 2025 ರಿಂದ 2028 ರವರೆಗೆ ಅವಿರೋಧವಾಗಿ ಆಯ್ಕೆಯಾದ 20 ಕಾರ್ಯಕಾರಿಣಿ ಸದಸ್ಯರನ್ನು ಚುನಾವಣಾಧಿಕಾರಿಗಳಾದ ಶ್ರೀ ರಾಮಸ್ವಾಮಿಯವರು ಘೋಷಿಸಿದರು.

1.ಶ್ರೀ ಅನಂತ.ಎಂ.ಎಸ್ 2.ಶ್ರೀ. ಪ್ರಭಾಕರ್.ಹೆಚ್.ಸಿ 3. ಶ್ರೀ.ನರಸಿಂಹಮೂರ್ತಿ.ಎ.ಆರ್ 4. ಶ್ರೀ. ರಮೇಶ್.ಎ 5. ಶ್ರೀ. ಗೋವಿಂದರಾಜ್ ಆಚಾರ್.ಕೆ 6. ಶ್ರೀ. ರಘುನಾಥ್ .ಎನ್ 7. ಶ್ರೀ.ಅಜೇಯ ಕೃಷ್ಣ.ಕೆ.ಆರ್ 8.ಶ್ರೀ. ಚೇತನ್.ಎನ್ 9. ಶ್ರೀ. ನರಸಿಂಹಯ್ಯ.ವಿ 10. ಶ್ರೀ ಸುಬ್ರಮಣ್ಯ.ಹೆಚ್.ಸಿ 11. ಶ್ರೀ. ಶ್ರೀನಿವಾಸ.ಎಸ್.ವಿ 12.ಶ್ರೀ.ಅನಂತರಾಮು.ಎಸ್ 13. ಶ್ರೀ.ಎಸ್.ಕೆ.ಎಲ್.ಎನ್.ಪ್ರಸನ್ನ 14. ಶ್ರೀ.ಹರೀಶ್ ಕುಮಾರ್.ಕೆ.ಆರ್ 15. ಶ್ರೀ. ಶ್ಯಾಮ್ ಸುಂದರ್.ಜಿ 16. ಶ್ರೀ. ಗುರುರಾಜಚಾರ್ 17.ಶ್ರೀ.ಕೌಶಲೇಂದ್ರ.ಎಸ್.ಎ.ಪಿ 18. ಶ್ರೀ. ರಾಘವೇಂದ್ರ.ಆರ್ 19. ಶ್ರೀಮತಿ. ದಿವ್ಯಾ ವಿನಯ್ 20.ಶ್ರೀಮತಿ. ಸಿಂಧು ಪ್ರಿಯದರ್ಶಿನಿ.

14/09/2025ರಂದು ಕಾರ್ಯಕಾರಿಣಿ ಸಭೆ ಜರುಗಿ, ಸಂಘದ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆಮಾಡಲಾಯಿತು.

**ಅಧ್ಯಕ್ಷರು** - ಶ್ರೀ. ರಮೇಶ್. ಎಂ

**ಉಪಾಧ್ಯಕ್ಷರುಗಳಾಗಿ** - ಶ್ರೀ. ನರಸಿಂಹಯ್ಯ.ವಿ; ಶ್ರೀ. ಪ್ರಭಾಕರ್. ಹೆಚ್.ಸಿ.

**ಕಾರ್ಯದರ್ಶಿ** - ಶ್ರೀ. ಎ.ಆರ್.ಎನ್. ಮೂರ್ತಿ

**ಜಂಟಿ ಕಾರ್ಯದರ್ಶಿಗಳಾಗಿ** - ಶ್ರೀ. ಅನಂತ.ಎಂ.ಎಸ್; ಶ್ರೀ. ಶ್ಯಾಮ್ ಸುಂದರ್. ಜಿ; ಶ್ರೀ. ಗೋವಿಂದರಾಜ್ ಆಚಾರ್.ಕೆ ; ಶ್ರೀ. ರಘುನಾಥ್ .ಎನ್

**ಖಜಾಂಚಿ** - ಶ್ರೀ. ಅಜೇಯ ಕೃಷ್ಣ.ಕೆ.ಆರ್

**ಈ ತ್ರೈಮಾಸಿಕದಲ್ಲಿ ಸದಸ್ಯರಾದವರ ವಿವರ:-**

| | | | |
|---|---|---|---|
| 1. ಶ್ರೀ. ಗುರುಪ್ರಸಾದ್.ಕೆ | ಸ. ಸಂಖ್ಯೆ 798 | 6. ಶ್ರೀಮತಿ. ಮೈತ್ರಿ. ಆರ್ | ಸ. ಸಂಖ್ಯೆ 804 |
| 2. ಶ್ರೀ.ವಿಶ್ವನಾಥ. ಟಿ.ಪಿ | ಸ. ಸಂಖ್ಯೆ 799 | 7. ಶ್ರೀಮತಿ. ರಮ್ಯಾ.ಎಂ.ಆರ್ | ಸ. ಸಂಖ್ಯೆ 805 |
| 3. ಶ್ರೀಮತಿ. ಜೆ.ಜಯಂತಿ | ಸ. ಸಂಖ್ಯೆ-800 | 8. ಶ್ರೀ. ಟಿ. ಷನ್ಮುಘನಾಥನ್ | ಸ.ಸಂಖ್ಯೆ 806 ಪೋಷಕರು |
| 4. ಶ್ರೀ.ಎಸ್.ರಾಮದುರೈ | ಸ. ಸಂಖ್ಯೆ-802 | 9. ಶ್ರೀ. ರಾಮಗೋಪಾಲ್ | ಸ.ಸಂ. 809 |
| 5. ಶ್ರೀ. ವಿಶ್ವನಾಥ. ಎಸ್ | ಸ. ಸಂಖ್ಯೆ 806 | 10. ಶ್ರೀ. ಗುರು ಮೋಹನ್. ಆರ್ | ಸ. ಸಂ. 810 |

ವಂದನೆಗಳೊಂದಿಗೆ

ರಮೇಶ್.ಎ, ಕಾರ್ಯದರ್ಶಿ (ನಿರ್ಗಮಿಸುವ)

# ಬಾಲಪ್ರಭಾ ದಿವಾಕರ ಕಾರಂತ್ – ನಿಸ್ವಾರ್ಥ ಯೋಗ ಗುರು



ಬಾಲಪ್ರಭಾ ದಿವಾಕರ ಕಾರಂತರು ಯೋಗ ಗುರುಗಳು. ಒಮ್ಮೆ ಅವರ ಯೋಗ ಶಿಷ್ಯರಾಗಿದ್ದ ಶ್ರೀ ಶಂಕರ ರೆಡ್ಡಿಯವರು,

" ನನ್ನ ಹೊಸ ಕಟ್ಟಡದ ಒಂದು ಮಹಡಿಯನ್ನು ನಿಮಗೆ ಉಚಿತವಾಗಿ ಕೊಡಬೇಕೆಂದು ಕೊಂಡಿದ್ದೇನೆ." ಎಂದಾಗ ಕಾರಂತರಿಗೆ ದಿಗ್ಭ್ರಮೆ. ಏನಿಲ್ಲವೆಂದರೂ ಅಂದಾಜು ಒಂದೂವರೆ ಕೋಟಿ ಬೆಲೆಬಾಳುವ ಮನೆ. ಬಹಳಷ್ಟು ಯೋಚಿಸಿ, ರೆಡ್ಡಿಯವರಿಗೆ ಕೇಳುತ್ತಾರೆ,

"ನಿಮ್ಮ ತೀರ್ಮಾನಕ್ಕೆ ಕಾರಣವೇನು?"

"ನಿಮ್ಮಂತಹ ನಿಸ್ವಾರ್ಥ ಸಮಾಜ ಸೇವಕರಿಗೆ ಕೊಟ್ಟರೆ ಯೋಗ ಉಳಿಯುತ್ತದೆ, ಸನಾತನ ಸಂಸ್ಕೃತಿ ಉಳಿಯುತ್ತದೆ, ಬೆಳೆಯುತ್ತದೆ." ಎನ್ನುತ್ತಾರೆ. ಆಗ ಕಾರಂತರು

" ಧರ್ಮ ಉಳಿಯಬೇಕಾದರೆ, ಯೋಗ, ವೇದ, ಧ್ಯಾನ, ಭಜನೆ ಧಾರ್ಮಿಕ ಕಾರ್ಯಕ್ರಮಗಳು ಎಲ್ಲವೂ ಬೇಕು. ಆ ರೀತಿ ನಡೆಸಿಕೊಂಡು ಹೋಗಲು ನೀವು ಈ ಕೊಡುಗೆಯನ್ನು ಈ ಬಡಾವಣೆಯ ಬ್ರಾಹ್ಮಣ ಸಂಘಕ್ಕೆ ನೀಡಿ. ನಿಮ್ಮ ಉದ್ದೇಶ ಈಡೇರುವಂತೆ ನಾವು ಶ್ರಮಿಸುತ್ತೇವೆ" ಎಂದು ವಿನಂತಿಸುತ್ತಾರೆ. ಕಾರಂತರ ಶ್ರೇಷ್ಠ ಜೀವನ ಮೌಲ್ಯ, ತನಗಾಗಿ ಬಂದ ಸಂಪತ್ತನ್ನು ಇಟ್ಟುಕೊಳ್ಳದೆ ಬ್ರಾಹ್ಮಣ ಸಂಸ್ಥೆಗೆ ಬಳುವಳಿ ಕೊಡಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಇಂದು ನಮ್ಮ ಬಡಾವಣೆಯ ಬ್ರಾಹ್ಮಣ ಸಂಘದ 'ಗಾಯತ್ರಿ ಭವನ' ಹೀಗೆ ಬಳುವಳಿಯಾಗಿ ಬಂದದ್ದು. ಶಿಷ್ಯನ ದಾನ, ಗುರುವಿನ ತ್ಯಾಗದ ಫಲ! ಇಂದಿನ ಸ್ವಾರ್ಥ ಸಮಾಜದಲ್ಲಿ ಇಂತಹ ನಿಸ್ವಾರ್ಥ ವ್ಯಕ್ತಿಯನ್ನು ಕಾಣುವುದು ದುರ್ಲಭವೇ ಸೈ!!

ಹೀಗೆ ಸುಮ್ಮನೆ ಕಾರಂತರ ಜೊತೆ ಅವರ ಜೀವನದ ಮಾತು ಆರಂಭಿಸಿದಾಗ ಅವರ ಸ್ಮರಣೆಯಲ್ಲಿ ಮೊದಲು ಬಂದ ಇಬ್ಬರು ಪೂರ್ವಿಕರಲ್ಲಿ ಒಬ್ಬರು ಅವರ ಮುತ್ತಾತ, ತನ್ನ ಹುಟ್ಟೂರಾದ ಗೋಕರ್ಣದಲ್ಲಿ ಬಂಗಲೆಯಂತಹ ಮನೆಯನ್ನು ಸರ್ಕಾರಿ ಶಾಲೆ ನಡೆಸುವುದಕ್ಕಾಗಿ ಬಿಟ್ಟುಕೊಟ್ಟ ಮೇಧಾವಿ. ಎರಡನೆಯದಾಗಿ ಅವರ ತಂದೆ ದಿವಾಕರ ಕಾರಂತ, ಅಂದಿನ ದಿನದಲ್ಲಿಯೇ ಪ್ರೌಢ ಶಾಲಾ ಇಂಗ್ಲೀಷ್ ಮಾಸ್ತರರಾಗಿದ್ದು; ವೈಯಕ್ತಿಕವಾಗಿ ಯೋಗ, ಧ್ಯಾನದಲ್ಲಿ ಪಾರಂಗತರಾಗಿದ್ದು ತನ್ನ ಶಿಷ್ಯರಿಗೆ ಅದರ ಮಹತ್ವವನ್ನು ಸಾರಿ ಹೇಳುತ್ತಿದ್ದರಂತೆ. ಇವೆರಡೂ ಮಹಾನ್ ಗುಣಗಳನ್ನು ವಂಶವಾಹಿಯಾಗಿ ಬಿ.ಡಿ. ಕಾರಂತರು ಸಂಪನ್ನಗೊಳಿಸಿಕೊಂಡಿದ್ದಾರೆ ಎಂದರೆ ಅತಿಶಯೋಕ್ತಿಯೇನಲ್ಲ.

ಗಂಜಿ ಊಟದಿಂದಲೇ ಆರಂಭವಾಗಿದ್ದುದು ಅವರ ಪ್ರೈಮರಿ ಶಾಲಾದಿನಗಳು. ಮನೆ ತುಂಬಾ ಮಕ್ಕಳು ದುಡಿಯುವವನೊಬ್ಬನೇ. ಅಂದಿನ ದಿನಗಳಲ್ಲಿ ಬಹಳಷ್ಟು ಕುಟುಂಬದ ಪರಿಸ್ಥಿತಿ ಹಾಗೆಯೇ ಇತ್ತು. ಕಡಲ ತೀರದ ಆ



ಚುರುಕುತನದಿಂದ ಕಾರಂತರು ಯಾವಾಗಲೂ ಓದುವುದರಲ್ಲಿ ಮುಂದೆ. ಪ್ರೌಢ ಶಾಲೆಯ ಗೆಳೆಯ ಜಯಂತ್ ಕಾಯ್ಕಿಣಿಗೆ " ವೀಕ್ ಎಂಡ್ ವಿಥ್ ರಮೇಶ್" ದೂರದರ್ಶನ ಕಾರ್ಯಕ್ರಮವೊಂದರಲ್ಲಿ ಬೆರಗುಗೊಳಿಸಿದುದನ್ನು ಕಾರಂತರು ಸಂತಸದಿಂದ ಸ್ಮರಿಸುತ್ತಾರೆ.

ಗಣಿತ ತನಗಲ್ಲವೆಂದು ಪ್ರೌಢ ಶಾಲೆಯಲ್ಲಿಯೇ ಕಲಾ ವಿಭಾಗವನ್ನು ಐಚ್ಛಿಕ ಪಠ್ಯವಾಗಿ ತೆಗೆದುಕೊಂಡಿದ್ದ ಕಾರಂತರು ಧಾರವಾಡದಲ್ಲಿ ಪಿ.ಯು.ಸಿ. ಮುಗಿಸಿ, ನಂತರ ಕುಮುಟಾ ಮತ್ತು ಅಂಕೋಲಾ ಕಾಲೇಜುಗಳಲ್ಲಿ ಓದಿ ಹೆಚ್ಚಿನ ಅಂಕ ತೆಗೆದುಕೊಂಡು ಎಕನಾಮಿಕ್ಸ್ ನಲ್ಲಿ ಬಿ.ಎ. ಪಾಸ್ ಮಾಡಿದರು. ಒಳ್ಳೆಯ ಸರ್ಕಾರಿ ಉದ್ಯೋಗದಲ್ಲಿದ್ದ ಅಣ್ಣ ಎಂ.ಎ. ಮಾಡು ಎಂದರೂ, ಕೇಳದಿದ್ದಾಗ ಅಣ್ಣನೇ ಕೆಲಸದ ದಾರಿ ಹುಡುಕಿಸಿಕೊಟ್ಟರು ಎಂದು ಅಭಿಮಾನದಿಂದ ಅಣ್ಣನನ್ನು ನೆನಪಿಸಿಕೊಳ್ಳುತ್ತಾರೆ ಕಾರಂತರು.

ಮುಂದೆ ಲಭಿಸಿದ್ದು ರಿಸರ್ವ್ ಬ್ಯಾಂಕ್ ನಲ್ಲಿ 'ನಾಣ್ಯ ಮತ್ತು ನೋಟ್ ಎಕ್ಸಾಮಿನರ್' ಕೆಲಸ. ಆಗ ತಾನೆ ಬೆಂಗಳೂರು ವಿಶ್ವವಿದ್ಯಾಲಯದವರು ಸಂಜೆ ಕಾಲೇಜಿನಲ್ಲಿ ಎಂ.ಬಿ.ಎ. ತರಗತಿಯನ್ನು ಆರಂಭಿಸುವುದಕ್ಕಾಗಿ ಅರ್ಜಿಗಳನ್ನು ಸ್ವೀಕರಿಸುತ್ತಿದ್ದರು. ಕಾರಂತರು ೧೦೦೦೦ ಅರ್ಜಿಗಳಲ್ಲಿ ಮೊದಲಿಗರಾಗಿ ಆಯ್ಕೆ ಆದದ್ದನ್ನು ಹೆಮ್ಮೆಯಿಂದ ಹೇಳಿಕೊಂಡರು. 'ಮಾರ್ಕೆಟಿಂಗ್ ರಿಸರ್ಚ್ ಅಂಡ್ ಅನಾಲಿಸಿಸ್' ನಲ್ಲಿ ಎಂ.ಬಿ.ಎ. ಮಾಡಿದರು. ಇದರಿಂದಾಗಿ ಅವರಿಗೆ ಆಸಕ್ತಿಯಿಲ್ಲದ ಕೆಲಸದಿಂದ ಮುಕ್ತಿ. ಅವರಿಗಾಗಿ ಹುಡುಕಿಕೊಂಡು ಬಂದದ್ದು 'ಕರ್ನಾಟಕ ತಾಂತ್ರಿಕ ಸಲಹಾ ಸೇವಾ ಸಂಸ್ಥೆ' ಯಲ್ಲಿ ಸಲಹೆಗಾರನಾಗಿ ಕೆಲಸ. ಹೊಸ ಸಂಸ್ಥೆಯಲ್ಲಿ ಹಲವಾರು ವಿನೂತನ ಪರಿಣಿತ ಸಲಹೆಗಳನ್ನು ನೀಡಿ ನಿಷ್ಣಾತ ಎನಿಸಿಕೊಂಡರು. ದೇಶದ ಉದ್ದಗಲಕ್ಕೂ ಓಡಾಡಿ ತಾಂತ್ರಿಕ ಸಲಹೆ ನೀಡಿದ್ದು ಕಾರಂತರ ಹೆಗ್ಗಳಿಕೆ.

ಕಾರಂತರು 'ಯೋಗ ಕಾರಂತ' ರಾದದ್ದೇ ಒಂದು ಸೋಜಿಗ. ಯೋಗಾಸಕ್ತರಾಗಿದ್ದ ಕಾರಂತರು ಬೆಂಗಳೂರಿನ ಹೆಚ್.ಎಸ್.ಆರ್. ಬಡಾವಣೆಯ, ಸಿ.ಪಿ.ಡಬ್ಲ್ಯೂ.ಡಿ ಪ್ರಾಂಗಣದಲ್ಲಿ ಪತಂಜಲಿ ಯೋಗ ಶಿಬಿರಾರ್ಥಿಯಾಗಿ ಭಾಗವಹಿಸುತ್ತಿದ್ದರು. ಶಿಬಿರದ ಕೊನೆಯಲ್ಲಿ ಪತಂಜಲಿ ಯೋಗ ಶಿಕ್ಷಕರು ಕಾರಂತರನ್ನೇ ಬೊಟ್ಟುಮಾಡಿ ತೋರಿಸಿ ಯೋಗ ತರಗತಿಗಳನ್ನು ಮುಂದುವರಿಸಿಕೊಂಡು ಹೋಗಿ ಎಂದು ಆಣತಿಯನ್ನಿತ್ತರಂತೆ. ಅಂದಿನಿಂದ ಇಂದಿನವರೆಗೂ, ಉಚಿತವಾಗಿ, ಸುಮಾರು ಹದಿನಾರು ವರ್ಷಗಳಿಂದ ದಿನಕ್ಕೆರಡು ಬಾರಿ ಯೋಗ ತರಗತಿಗಳನ್ನು ನಡೆಸುತ್ತಾ, ಅಂದಾಜು ೨೦೦೦ ಆಸಕ್ತರಿಗೆ ಯೋಗ ಕಲಿಸಿಕೊಟ್ಟಿದ್ದಾರೆ. ಮಧ್ಯದಲ್ಲಿ ಶ್ರೀ ಬಾಬಾ ರಾಮದೇವ ಅವರ ಪತಂಜಲಿ ಯೋಗ ಶಿಬಿರಕ್ಕೆ ಕರೆಸಿಕೊಂಡು, ಹೆಚ್ಚಿನ ಪರಿಣಿತಿಯನ್ನು ನೀಡಿದ್ದು ವಿಶೇಷ. ಯೋಗದಲ್ಲಿಯೇ ಜೀವನ ಸಾರ್ಥಕತೆಯನ್ನು ಪಡೆದುಕೊಂಡ ಕಾರಂತರು ತಮ್ಮ ಪತ್ನಿ ಶ್ರೀಮತಿ ರೇಖಾ ಕಾರಂತ ಅವರನ್ನೂ ಯೋಗ ಶಿಕ್ಷಕಿಯನ್ನಾಗಿಸಿ ಬಡಾವಣೆಯ ಮಹಿಳೆಯರಿಗೂ ಯೋಗ ತರಗತಿಗಳನ್ನು ನಡೆಸುವಲ್ಲಿ ಯಶಸ್ವಿಯಾಗಿದ್ದಾರೆ.

ಹೆಂಡತಿ, ಇಬ್ಬರು ಹೆಣ್ಣುಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳನ್ನು ಹೊಂದಿ ಸಂತೃಪ್ತ ಜೀವನವನ್ನು ನಡೆಸುತ್ತಾ ಬಂದಿದ್ದಾರೆ ಶ್ರೀ ಕಾರಂತರು. ಬಡಾವಣೆಯ ಶ್ರೀ ವಿನಾಯಕ ಸಾಂಸ್ಕೃತಿಕ ಪ್ರತಿಷ್ಠಾನ, ಬ್ರಾಹ್ಮಣ ಸಂಘ ಹಾಗೂ ಇನ್ನಿತರ ಸಾಮಾಜಿಕ ಸಂಸ್ಥೆಗಳಲ್ಲಿ ನಿರಂತರ ಸೇವೆಯನ್ನು ಸಲ್ಲಿಸುತ್ತಾ ಬರುತ್ತಿದ್ದಾರೆ. ಇನ್ನಷ್ಟು ಸಮಾಜಮುಖಿ ಕಾರ್ಯಗಳನ್ನು ಮಾಡಲು ಶಕ್ತಿ ಸಾಮರ್ಥ್ಯಗಳನ್ನು ಕಾರಂತ ದಂಪತಿಗಳಿಗೆ ಆ ಭಗವಂತನು ಅನುಗ್ರಹಿಸಲಿ ಎಂದು ಹಾರೈಸುತ್ತೇವೆ.

Sankalp Nethralaya & Polyclinic
NABH CERTIFIED ISO 9001 : 2017
(A UNIT OF SUBHSANKALP NETHRALAYA & POLYCLINIC PVT. LTD.)
One Stop Solution For All Eye Related Problems & Surgeries
Centre Of Excellence For Laser Cataract Surgeries
Cashless Facility available for all Major TPA Insurance
SN1: 85/1 19th Main Road, Sector 1, HSR Layout, Bangalore - 560102 Tel: 080 22580466 | Mob: 9739724666
SN2: #87, Ground Floor, Ashraya Building, Central Jail Road, Naganathpura, Electronic City Post; Bangalore - 560100 Tel: 080 25735556 | Mob: 8147323555
Email: sankalpnethralaya@gmail.com
Timings : 10am to 8pm

ANAND DIAGNOSTIC LAB
A Neuberg Associate
In Association with SANKALP DIAGNOSTIC LAB
Now at HSR Layout
# 511, 15th C Main, 15th Cross, Sector 4, HSR Layout, Bangalore 560 102.
For all Blood Investigations, ECG & Ultra Sound
Ph : 080 4147 9460 / Mob : 89511 64466
Timings : 7am to 7pm

# ಆತ್ಮಸಾಕ್ಷಾತ್ಕಾರ ಮತ್ತು ವಿಶ್ವ ಪ್ರೇಮ

ಈಶೋಪನಿಷತ್ತಿನ ನಾಲ್ಕು ಮತ್ತು ಐದನೇ ಮಂತ್ರಗಳು ಹೀಗಿವೆ.

**ಅನೇಜದೇಕಮ್ ಮನಸೋ ಜವೀಯೋ**
**ನೈನದ್ದೇವಾ ಆಪ್ನುವನ್ ಪೂರ್ವಮರ್ಷತ್**
**ತದ್ಧಾವತೋನ್ಯಾನ್ ಅತ್ಯೇತಿ ತಿಷ್ಠತ್**
**ತಸ್ಮಿನ್ ಆಪೋ ಮಾತರಿಶ್ವಾ ದಧಾತಿ**

ಅಂದರೆ ಆತ್ಮವು ಒಂದು. ಅದು ಚಲಿಸುವುದಿಲ್ಲ. ಆದರೂ ಅದು ಮನಸ್ಸಿಗಿಂತ ವೇಗವಾದುದು. ಹೀಗೆ ವೇಗವಾಗಿ ಚಲಿಸುತ್ತಾ ಅದು ಇಂದ್ರಿಯಗಳ ಗ್ರಹಣವನ್ನು ಮೀರುತ್ತದೆ. ತಾನು ಸ್ಥಿರವಾಗಿದ್ದು ಓಡುವ ಎಲ್ಲವನ್ನು ಮೀರುತ್ತದೆ. ಸುಮ್ಮನೆ ಇದ್ದೇ ವಿಶ್ವ ಶಕ್ತಿಯಾದ ಅದು ಎಲ್ಲ ಜೀವಿಗಳ ಚಟುವಟಿಕೆಗಳಿಗೂ ಶಕ್ತಿಯನ್ನು ನೀಡುತ್ತದೆ ಆತ್ಮ. ಆತ್ಮವು ಅನಂತ, ಅಮರ. ಅದು ಯಾವ ಇತಿಮಿತಿಗಳು ಇಲ್ಲದ್ದು. ಹಾಗಾದರೆ ಅದನ್ನು ಅಭಿವ್ಯಕ್ತಿಗೊಳಿಸುವುದು ಹೇಗೆ? ಅರ್ಥಮಾಡಿಕೊಳ್ಳುವುದು ಹೇಗೆ? ಎಂಬ ಪ್ರಶ್ನೆ ಉದ್ಭವಿಸಿದಾಗ ಇದೆಂತಹ ಒಗಟು ಎಂದೆನಿಸುತ್ತದೆ. ವಾಸ್ತವವಾಗಿ, ಅದೊಂದು ವಸ್ತುವಾಗಿದ್ದರೆ ಅದರ ರೂಪ ಗುಣ ಲಕ್ಷಣಗಳನ್ನು ಉದ್ದ ಅಗಲ ಎತ್ತರ ಎಂದು ಹೇಳಬಹುದು. ಆದರೆ ಆತ್ಮ ಅನಂತವಾಗಿದೆ, ಅಮಿತವಾಗಿದೆ. ಅದರ ಲಕ್ಷಣ ನಿರೂಪಣೆ ಸಾಧ್ಯವಾಗುವುದಿಲ್ಲ. ಅದರ ಆರಂಭ, ಅಂತ್ಯ ಎಲ್ಲಿ ಎನ್ನುವುದು ಚಿಂತನೆಗೆ ನಿಲುಕದು.

ವೇದಾಂತದ ಭಾಷೆಯಲ್ಲಿ ಹೇಳಬೇಕೆಂದರೆ, ದೇಶ ಆಕಾಶ, ಅನಂತ ಮತ್ತು ಅತೀತಗಳು ಆತ್ಮದ ಅತ್ಯಂತ ಸಮೀಪದ ಸಂಕೇತ ಎನ್ನಬಹುದು. ವೈಜ್ಞಾನಿಕ ಕಲ್ಪನೆಯು ಕೂಡ ಆತ್ಮವನ್ನು ದೇಶಕಾಲ ನಿರಂತರತೆಯ ಸಮೀಪ ಎನ್ನುತ್ತದಾದರೂ, 'ಅತೀಂದ್ರಿಯ' ಎನ್ನುತ್ತದೆ. ಅಮಿತ, ನಿತ್ಯಶುದ್ಧ ಅವಿನಾಶಿ ಲಕ್ಷಣಗಳು ಆತ್ಮವನ್ನು ಅರಿಯುವ ಸಂಕೇತಗಳು. ಇಂದ್ರಿಯಗಳಾಗಲಿ, ಮನಸ್ಸಾಗಲಿ ಆತ್ಮದಷ್ಟು ವೇಗವಾಗಿ ಓಡಲಾರವು. ಆತ್ಮ ಮನಸ್ಸಿಗಿಂತ ವೇಗವಾದುದು. ಆದರೆ ಅದು ಚಲನೆಯಲ್ಲಿದ್ದು ಸ್ಥಿರವಾದದ್ದು. ಆತ್ಮವು ಬೆಳಕಿಗಿಂತ ಬೇಗವಾಗಿ ಮನಸ್ಸಿಗಿಂತ ವೇಗವಾಗಿ ಚಲಿಸುತ್ತದೆ. ಮಾನವನ ಆತ್ಮವು ವಿಶ್ವದ ಎಲ್ಲಾ ಶಕ್ತಿಗಳ ಸರ್ವವ್ಯಾಪ್ತಿಯನ್ನು ಹೊಂದಿ, ಅನಂತವೂ ಆದ ಹಿನ್ನಲೆಯನ್ನು ಹೊಂದಿದೆ. ಆತ್ಮ ಶುದ್ಧ ಸತ್ಯವೂ, ಶುದ್ಧ ಚಿತ್ತವೂ ಆಗಿದೆ.

ಶ್ರೀ ಶಂಕರಾಚಾರ್ಯರು ಮೇಲ್ಕಂಡ ಮಂತ್ರದ ವ್ಯಾಖ್ಯಾನದಲ್ಲಿ ಹೀಗೆ ಹೇಳಿದ್ದಾರೆ.

"ಮನಸ್ಸು, ಬ್ರಹ್ಮ ಲೋಕವೇ ಮುಂತಾದ ಅತ್ಯಂತ ದೂರದ ಲೋಕಗಳತ್ತ ವೇಗವಾಗಿ ಚಲಿಸುತ್ತಿರುವಾಗ ಶುದ್ಧ ಚೈತನ್ಯ ಸ್ವರೂಪವಾದ ಆತ್ಮವೂ ಈಗಾಗಲೇ ಅಲ್ಲಿರುವುದನ್ನು ಕಾಣುತ್ತದೆ. ಆದ್ದರಿಂದಲೇ ಅದು ಮನಸ್ಸಿಗಿಂತ ವೇಗವಾದದ್ದು. ಅಲ್ಲಿ ನೋಡಿದಾಗ 'ತತ್ವಂ ಅಸಿ' ಅದು ನೀನೇ ಆಗಿದ್ದೀಯ."


ಚಾಂದೋಗ್ಯ ಉಪನಿಷತ್ತಿನಲ್ಲಿ ಈ ಇಡೀ ವಿಶ್ವವು ಆತ್ಮನಲ್ಲಿ ಕೇಂದ್ರೀಕೃತವಾಗಿದೆ ಎನ್ನುತ್ತದೆ. ಯಾವುದನ್ನು ಬೇರಾವುದೂ ಮೀರಿಸಲಾರದೋ, ದಾಟಲಾರದೋ, ಅದು ಕೇವಲ ಸತ್, ಕೇವಲ ಚಿತ್, ಬ್ರಹ್ಮವೇ. ಅದೇ ಆತ್ಮ. ಅದೇ ಶುದ್ಧ ಚೈತನ್ಯ. ಅದನ್ನು ವಿಭಜಿಸಲಾಗುವುದಿಲ್ಲ. ಮಾನವನಲ್ಲಿಯ ಅನಂತತೆ, ಪ್ರಕೃತಿಯಲ್ಲಿನ ಅನಂತತೆ, ಮತ್ತು ಅವೆರಡರ ಐಕ್ಯತೆ. 'ಸರ್ವಂ ಖಲು ಇದಂ ಬ್ರಹ್ಮ' ಅಂದರೆ ಈ ವಿಶ್ವವೆಲ್ಲ ಬ್ರಹ್ಮವೇ.

ಉಪನಿಷತ್ತುಗಳ ಪರಮ ಗುರಿ ಮಾನವನ ಅಲ್ಪತೆ ಮತ್ತು ಕ್ಷುಲ್ಲಕತೆಗಳಿಂದ ಅವನ ನೀರಸ ಬದುಕಿನಿಂದ ಆತನನ್ನು ಮೇಲಕ್ಕೆತ್ತಬಲ್ಲ ದಿವ್ಯ ಜ್ಞಾನವನ್ನು ಪರಿಚಯಿಸುವುದು. ಇಂದ್ರಿಯ ಬದ್ಧ ಬದುಕಿನಿಂದ ಅವನ ಚೇತನದ ಅನಂತತೆಯ ನೈಜ ಆನಂದದ ಬದುಕಿಗೆ ಒಯ್ಯುವುದು. ಅಂದರೆ 'ತಮಸೋಮ ಜ್ಯೋತಿರ್ಗಮಯ' ಕತ್ತಲಿನಿಂದ ಬೆಳಕಿನೆಡೆಗೆ ಕೊಂಡೊಯ್ಯುವುದು. ಪ್ರತೀ ಜೀವಿಯೂ ತಾನು ಒಂದು, ತನ್ನಿಂದ ಯಾರೂ ಬೇರೆಯಲ್ಲ ಎಂಬುದನ್ನು ತಿಳಿದಾಗ, ಯಾರು ಯಾರನ್ನು ತಾನೆ ದ್ವೇಷಿಸಿ ಯಾರು?

ಇಂತಹ ಸಂದರ್ಭದಲ್ಲಿ ಏಕ ಮಾತ್ರ ಅಭಿವ್ಯಕ್ತಿ ಎಂದರೆ ವಿಶ್ವಪ್ರೇಮ ಅಂದರೆ ಮುಕ್ತಸೇವೆ. ಸೇವೆ ಮತ್ತು ಪ್ರೇಮ ಎಂದರೆ ಬೆಸೆಯುವ ಶಕ್ತಿ. ದ್ವೇಷವಾದರೂ ಪ್ರತ್ಯೇಕತಾಭಾವದಿಂದ ಮೂಡಿರುತ್ತದೆ. ಬದಲಾಗಿ, ಇಲ್ಲಿ ಪ್ರೇಮವೇ ಸಾಕ್ಷಾತ್ಕಾರಗೊಂಡಾಗ ಅದು ಭಾರತೀಯ ಚಿಂತನೆಯ ಪ್ರಕಾರ ಮಾನವ ಶ್ರೇಷ್ಠತೆಯ ಶಿಖರ. ಈ ಸಾಕ್ಷಾತ್ಕಾರದೊಂದಿಗೆ ಮಾನವನು ಎಲ್ಲಾ ಮಾನವ ಜೀವಿಗಳಲ್ಲೂ ಇರುವ ಆತ್ಮ ಒಂದೇ ಎಂಬ ಅನುಭವವನ್ನು ಪಡೆಯುತ್ತಾನೆ. ಇದರ ಮೂಲಕ ಜೀವನ ಸಫಲತೆಯನ್ನು ಪಡೆದುಕೊಳ್ಳಬಹುದು. ಈ ರೀತಿಯ ಏಕತೆಯನ್ನು ಪಡೆದುಕೊಂಡವರಿಗೆ ಮೋಹ ಎಲ್ಲಿ? ದುಃಖ ಎಲ್ಲಿ?

**"ತತ್ರಕೋ ಮೋಹಃ ಕಃ ಶೋಕಃ ಏಕತ್ವಮ್ ಅನುಪಶ್ಯತಃ".**

**(ಆಧಾರ: ಶ್ರೀ ಸ್ವಾಮೀ ರಂಗನಾಥಾನಂದ ರ 'ಉಪನಿಷತ್ತುಗಳ ಸಂದೇಶ') ಸಂಗ್ರಹ: ಶ್ರೀಧರ ರಾವ್ ಹೆಚ್.**


Pure Since 1925
Divinity crafted in gold.
BHIMA
FORMERLY
BHIMA
Also available at
bhimagold.com
BHIMA Helpline
1800-121-9076
BENGALURU: Dickenson Road • Jayanagar 3rd Block • Koramangala • HBR Layout
Rajajinagar • Marathahalli • Hoodi • Malleshwaram • Jayanagar 4th Block • Commercial Street
UDUPI • HASSAN • MANGALURU • SHIVAMOGGA • VIJAYAWADA • CHENNAI
RAJAHMUNDRY • HOSUR • BELAGAVI • HUBBALLI

# ವಾರ್ಷಿಕ ಸರ್ವ ಸದಸ್ಯರ ಸಭೆ










SME | S.M.ENTERPRISES

WE MANUFACTURE & REPAIR ENERGY EFFICIENT STAR RATED TRANSFORMERS

DISTRIBUTION TRANSFORMERS

- Range : 15KVA – 1000KVA
- Services : Manufacturing, repair & reconditioning
- Type : Dry type & conventional type

ADDRESS

C-28 KSSIDC, Industrial Estate, 1st Stage, Mandya – 571402.
Branches : Mathikere (Bengaluru), Gubbi, Chitradurga
Mobile: +91 9845203607
Email: sme_mathikere@yahoo.com



## ಗುರುಪೂರ್ಣಿಮಾ ಪೂಜೆ





## ಉಪಾಕರ್ಮ ಕಾರ್ಯಕ್ರಮ






## ಸಂಘದ ಗಾಯತ್ರೀ ಭವನದಲ್ಲಿ ಜರುಗುತ್ತಿರುವ ಕಾರ್ಯಕ್ರಮಗಳು.

1. ಸನ್ಮಾನ್ಯ ಸದಸ್ಯರೇ, ಪ್ರತೀ ಶನಿವಾರ ಮತ್ತು ಭಾನುವಾರದಂದು ಬೆಳಿಗ್ಗೆ 6.15 ರಿಂದ 8.00 ಗಂಟೆಯವರೆಗೆ ವೇದ ಗುರುಗಳಿಂದ ಎರಡು ಗುಂಪುಗಳಲ್ಲಿ ವೇದ ತರಗತಿಗಳು ಜರುಗುತ್ತಿವೆ.
2. ಪ್ರತೀ ಸೋಮವಾರದಿಂದ ಶುಕ್ರವಾರದವರೆಗೆ ( 5 ದಿನಗಳು ) ಯೋಗ ಗುರುಗಳಾದ ಶ್ರೀಮತಿ ಪ್ರೇಮರೆಡ್ಡಿ ರವರಿಂದ ಸಂಜೆ 5 ರಿಂದ 6 ರ ವರೆಗೆ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯ ವತಿಯಿಂದ ಸಾರ್ವಜನಿಕವಾಗಿ, ಯೋಗದ ತರಗತಿ ಜರುಗುತ್ತಿವೆ.
3. ಪ್ರತೀ ತಿಂಗಳ ತ್ರಯೋದಶಿಯಂದು ಸಂಜೆ 5.30 ಕ್ಕೆ ಸಾರ್ವಜನಿಕವಾಗಿ ಪ್ರದೋಷ ಪೂಜೆಯು ಗಾಯತ್ರೀ ಭವನದಲ್ಲಿ ಜರುಗುತ್ತಿವೆ.



BENGALURU: Sarjapura Road, HSR LAYOUT

KARNATAKA | TELANGANA | ANDHRA PRADESH | TAMIL NADU | PUDUCHERRY |

# ಕೀಳರಿಮೆಯ ಸಂಕೀರ್ಣತೆಯನ್ನು ಜಯಿಸುವುದು

**(Win over the Inferiority Complex )**

ಎಷ್ಟೋ ಬಾರಿ ಮಕ್ಕಳಿರಲಿ ದೊಡ್ಡವರಿರಲಿ,

" ನನಗೆ ತಿಳಿಯದು. ನನ್ನ ಕೈಲಾಗದು. ಏನು ಮಾಡಬೇಕೋ? ಹೇಗೋ? " ಎನ್ನುವಂತಹ ಅಪಕ್ವ ಮಾತುಗಳನ್ನು ಆಗಾಗ ಆಡುತ್ತಿರುತ್ತಾರೆ. ಆ ವ್ಯಕ್ತಿಯು ಗುಂಪಿನಲ್ಲಿದ್ದಾಗ ಅಥವಾ ಗೆಳೆಯರೊಂದಿಗೆ ಇದ್ದಾಗ ಈ ಒಂದು ಕೀಳರಿಮೆಯ ಭಾವನೆಯನ್ನು ಹೆಚ್ಚು ಹೆಚ್ಚಾಗಿ ಪ್ರದರ್ಶಿಸುತ್ತಾರೆ. ಅದೇ ಆತನು ಒಬ್ಬನೇ ಇದ್ದಾಗ ತಾನು ಯಾವುದನ್ನು ಕೈಲಾಗದು ಎಂದಿದ್ದನೋ ಅದೇ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಬಲ್ಲನು. ತಾನು ಹಾಡಲಾರೆ ಎಂದವನು ಮಧುರವಾಗಿ ಹಾಡಿಯಾನು. ನಾನು ಚಿತ್ರ ಬರೆಯಲಾರೆ ಎಂದವನು ಸುಂದರ ಚಿತ್ರವನ್ನು ಬಿಡಿಸಿಯಾನು, ದಡ್ಡ ಅಂದುಕೊಂಡವನು ಶಾಲೆಯಲ್ಲಿ ಒಳ್ಳೆಯ ಅಂಕವನ್ನು ಗಳಿಸಿಯಾನು. ಆತ ಸ್ಪರ್ಧೆಯನ್ನೂ ಒಡ್ಡಬಲ್ಲನು. ಹಾಗಾದರೆ, ಅಪಕ್ವ ಮಾತುಗಳೇಕೆ?

ಅದೇ ಕೀಳರಿಮೆಯ ಸಂಕೀರ್ಣತೆ. ಇತರರ ಮುಂದೆ ತನ್ನ ವೈಯಕ್ತಿಕ ಸಾಮರ್ಥ್ಯವನ್ನು ಪ್ರದರ್ಶಿಸಿದರೆ, ತಾನು ಅಪೂರ್ಣ ಎಣಿಸಿಕೊಂಡೇನು, ಅವಹೇಳನಕ್ಕೆ ತುತ್ತಾದೇನು ಎಂಬ ಅವ್ಯಕ್ತ ಭಯ. ಈ ಭಾವನೆಗಳಿಂದ ಮುಕ್ತನಾಗಲು ಅವನಿಗೆ ಬೇಕಿರುವುದು ಸ್ವಯಂ ಮೌಲ್ಯ. ತನ್ನ ತನದ ಸ್ವೀಕೃತಿ. ಇದು ಸಾಕ್ಷಾತ್ಕಾರವಾದಾಗ ವ್ಯಕ್ತಿ ತನ್ನ ಮೇಲರಿಮೆಯ ಕಡೆಗೆ ಪಯಣವನ್ನು ಆರಂಭಿಸಿದನೆಂದರ್ಥ. ಕೀಳರಿಮೆಯಿಂದ ಮೇಲಕ್ಕೆ ಬರುವಂತಹ ಮಾರ್ಗದರ್ಶನ ಸಿಕ್ಕದೆ, ಪ್ರಯತ್ನವನ್ನು ಮಾಡದೆ, ಎಷ್ಟೋ ಯುವಕ, ಯುವತಿಯರು ತಮ್ಮ ಭವಿಷ್ಯವನ್ನೇ ಅಂಧಕಾರಮಯವನ್ನಾಗಿ ಮಾಡಿಕೊಂಡಿರುವಂತಹ ಹಲವಾರು ಉದಾಹರಣೆಗಳು ಇವೆ.

ಕೀಳರಿಮೆ ಏಕೆ ಬರುತ್ತದೆ ಎಂದು ವಿಶ್ಲೇಷಿಸಿದಾಗ, ಮುನ್ನೆಲೆಗೆ ಬರುವುದು ವ್ಯಕ್ತಿಯಲ್ಲಿರುವ ಅಭದ್ರತೆ ಮತ್ತು ಅಸಮರ್ಪಕತೆಯ ಭಾವನೆಗಳು. ಇಂದರಿಂದಾಗಿ, ತನ್ನ ಸಾಮರ್ಥ್ಯವನ್ನು ಒರೆಗೆ ಹಚ್ಚದಿರುವುದು, ತನ್ನ ಮುಂದೆ ವಿಶಾಲವಾದ ಗುರಿಯನ್ನು ಹೊಂದದಿರುವುದು, ಗುರಿಗಾಗಿ ಪ್ರಯತ್ನವನ್ನು ಪಡದಿರುವುದು, ಅಥವಾ ಅದಕ್ಕೆ ಬೇಕಾದ ಛಲವನ್ನು ಬೆಳೆಸಿಕೊಳ್ಳದಿರುವುದು ಕಂಡು ಬರುತ್ತದೆ.

ಕೀಳರಿಮೆಯ ಕೆಲವು ಉದಾಹರಣೆಗಳು ಯುಗಾಂತರಗಳಿಂದಲೂ ಕಾಣಬಹುದು. ರಾಮಾಯಣದಲ್ಲಿ ಬರುವ ಹನುಮಂತ, ಆತನಿಗೆ ತನ್ನ ಶಕ್ತಿ, ಸಾಮರ್ಥ್ಯದ ತಿಳುವಳಿಕೆ ಇರಲಿಲ್ಲ. ಆದರೆ ಆತನ ಬಂಧು-ಭಾಂದವರು, ಕಪಿ ಸೈನ್ಯ ಆತನಲ್ಲಿ ಶಕ್ತಿ ಸಾಮರ್ಥ್ಯವಿದೆ ಎಂದು ಹುರಿದುಂಬಿಸಿ ಸಾಗರೋಲ್ಲಂಘನೆಗೆ ಪ್ರಚೋದಿಸಿ ಆತನ ನಿಜವಾದ ಶಕ್ತಿ ಸಾಮರ್ಥ್ಯದ ಪ್ರಯೋಜನವನ್ನು ಪಡೆಯುವುದು. ಎರಡನೆಯ ಉದಾಹರಣೆ ಎಂದರೆ ಕರ್ಣನು ತಾನು ಸೂತಕುಲದಲ್ಲಿ ಹುಟ್ಟಿದವನು ಎಂಬ ಕೀಳರಿಮೆಯನ್ನು ಸದಾಕಾಲ ತನ್ನ ಜೀವನ ಪರ್ಯಂತ ತೋರ್ಪಡಿಸುವುದು. ತನ್ನ ನಿಜ ಹುಟ್ಟಿನ ಬಗ್ಗೆ ತಿಳಿದಾಗ ಅದನ್ನು ಸಂಭ್ರಮಿಸುವ ಅವಕಾಶದಿಂದ ವಂಚಿತನಾಗಿದ್ದುದು ಕರ್ಣನ ದುರ್ವಿಧಿ.

ಪ್ರಸಕ್ತ ಕಾಲಮಾನಕ್ಕೆ ಬಂದರೆ ಭಾರತ ಬ್ರಿಟಿಷರ ಗುಲಾಮಗಿರಿಯಲ್ಲಿ ಇದ್ದಾಗ, ಹಲವು ಹಿಂದೂರಾಜರು ಬ್ರಿಟಿಷರಿಗಿಂತ ಸಮರ್ಥ ಶಾಲಿಗಳಿದ್ದರೂ, ಭಯಭೀತರಾಗಿ ಅವರಿಗೆ ಕಪ್ಪ ಕಾಣಿಕೆಗಳನ್ನು ಸಲ್ಲಿಸುತ್ತಾ ಸಾಮಂತ ರಾಜರಾಗಿದ್ದುದು.

ನನ್ನ ವೈಯಕ್ತಿಕ ವಿಚಾರದಲ್ಲಿ ಒಮ್ಮೆ ಶಾಲಾ ದಿನದಲ್ಲಿ ಅಧ್ಯಾಪಕರ ಬಲವಂತದಿಂದ ಒಂದು ಸಭೆಯಲ್ಲಿ ಮಾತನಾಡಬೇಕೆಂದಾಗ, ಅಷ್ಟೊಂದು ಜನಸಮೂಹ ಎದುರಿಸಲಾರೆನೆಂಬ ಕೀಳರಿಮೆಯಿಂದ ಸಭಾಂಗಣದಿಂದಲೇ ಓಡಿಹೋಗಿದ್ದೆ. ಈ ಕೀಳರಿಮೆಯ ಅರಿವು ಮನದಲ್ಲಿ ಚುಚ್ಚುತ್ತಲಿದ್ದಾಗ, ಅದನ್ನು ಎದುರಿಸಲೇಬೇಕೆಂಬ ಛಲ, ಅದಕ್ಕಾಗಿ ಬೇಕಾದ ಶಿಕ್ಷಣ ಮತ್ತು ವಿಚಾರಗಳ ಸಂಗ್ರಹವನ್ನು ಮಾಡುವ ಪ್ರಯತ್ನದಲ್ಲಿ ಯಶಸ್ವಿಯಾಗಿ ಮತ್ತೆ ಶಾಲಾ ದಿನಗಳಲ್ಲಿಯೇ ಉತ್ತಮ ವಾಗ್ಮಿ ಎಂಬ ಹೆಸರನ್ನೂ, ಪ್ರಶಸ್ತಿಗಳನ್ನೂ ಪಡೆದಿದ್ದೆ.

ಕೀಳರಿಮೆ ಹುಟ್ಟಲು ಮತ್ತು ಬೆಳೆಯಲು ಹಲವಾರು ಕಾರಣಗಳಿರುತ್ತವೆ. ಅದರಲ್ಲಿ ಹೆಚ್ಚಾಗಿ ಗಮನಕ್ಕೆ ಬರುವುದು,

- ಕೆಳವರ್ಗದಲ್ಲಿ ಜನಿಸಿದ್ದೇನೆಂಬ ಸಾಮಾಜಿಕ ಕಲ್ಪಿತ ಚಿಂತನೆ.
- ತಾನು ಎಲ್ಲರಂತಲ್ಲ, ತಿಳುವಳಿಕೆ ಇಲ್ಲ, ಬುದ್ಧಿವಂತನಲ್ಲ ಎಂದು ತನಗೆ ತಾನೇ ಹಾಕಿಕೊಂಡ ಬೇಲಿ, ವಿಧಿಸಿಕೊಂಡ ಮಿತಿ.
- ಹುಟ್ಟಿನಿಂದ ವ್ಯಕ್ತಿಗಳಲ್ಲಿರುವ ದೈಹಿಕ ಅಥವಾ ಮಾನಸಿಕ ನ್ಯೂನತೆಗಳು.
- ತನ್ನ ಪ್ರಯತ್ನಗಳಲ್ಲಿ ಕಂಡ ಕಷ್ಟ ನಷ್ಟಗಳು, ಸೋಲು.
- ತೀವ್ರ ಸ್ಪರ್ಧೆಯನ್ನು ಎದುರಿಸಲು ಹಿಂಜರಿದು ಇದ್ದುದರಲ್ಲಿಯೇ ತೃಪ್ತನೆಂಬ ಮನಸ್ಥಿತಿ.
- ತಾನು ಎಲ್ಲರನ್ನೂ ಗೆಲ್ಲಲೇಬೇಕು ಎಲ್ಲರಿಂದಲೂ ಹೊಗಳಿಸಿಕೊಳ್ಳಲೇ ಬೇಕೆಂಬ ಧಾವಂತ.
- ಚಿರಪರಿಚಿತರಿಂದ 'ನಿನ್ನಿಂದ ಏನೂ ಆಗುವುದಿಲ್ಲ ನೀನು ಅಪ್ರಯೋಜಕ' ಎಂಬಿತ್ಯಾದಿ ಧೃತಿಗೆಡಿಸುವ ಮೂದಲಿಕೆ.
- ವ್ಯಕ್ತಿಯಲ್ಲಿರುವ ಸಾಮರ್ಥ್ಯ ಕೌಶಲ್ಯಗಳನ್ನು ಪರೀಕ್ಷೆಗೆ ಒಡ್ಡಿಕೊಳ್ಳದಿರುವ ಪರಿಸ್ಥಿತಿ.

ಒಂದು ರೀತಿಯಲ್ಲಿ ಕೀಳರಿಮೆ ಎನ್ನುವುದು ಒಂದು ಸ್ವಯಂ ಕಲ್ಪಿತ ವಿಷ ಚಕ್ರ. ಆ ವರ್ತುಲದಿಂದ ಹೊರಬರಲು ತನ್ನ ಕೌಶಲ್ಯಗಳನ್ನು ಸಾಮರ್ಥ್ಯಗಳನ್ನು ಆಗಾಗ ಪ್ರದರ್ಶಿಸಲೇ ಬೇಕಾಗಿರುವುದು ವ್ಯಕ್ತಿಯ ಆದ್ಯತೆಯಾಗಿರಬೇಕು. ಸೋಲು ಅಥವಾ ನಷ್ಟಗಳಿಗೆ ಭಯಭೀತರಾಗಬಾರದು. ಪ್ರಯತ್ನವನ್ನು ಮುಂದುವರಿಸುತ್ತಾ, ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡಾಗ ವ್ಯಕ್ತಿಗೆ ತನ್ನ ಶಕ್ತಿ ಸಾಮರ್ಥ್ಯವನ್ನು

ಪ್ರದರ್ಶಿಸಲು, ಸ್ವಯಂ ಮೌಲ್ಯ ವನ್ನು ಅಂದಾಜಿಸಲು ಮತ್ತು ಮೇಲರಿಮೆಯ ಮಾರ್ಗವನ್ನು ಕ್ರಮಿಸುವುದು ಸಾಧ್ಯವಾಗುತ್ತದೆ.

ಸ್ವ-ಸಹಾನುಭೂತಿ, ಸ್ವಯಂ ಮೌಲ್ಯ ಮೇಲರುಮೆಯ ಮೂಲ ಮಂತ್ರ. 'ನಾನು ಇರಬೇಕಾಗಿರುವುದು ನನ್ನಂತೆಯೇ. ಇತರರೊಂದಿಗೆ ನನ್ನನ್ನು ನಾನು ಅತಿಯಾಗಿ ಹೋಲಿಸಿಕೊಳ್ಳಬಾರದು.' ಎಂಬ ಆಂತರಿಕ ಪ್ರಜ್ಞೆ. ಪ್ರತಿ ವ್ಯಕ್ತಿಯು ಎಲ್ಲ ಚಟುವಟಿಕೆಗಳಲ್ಲಿಯೂ ಪ್ರತಿಭಾವಂತನಾಗಲು ಸಾಧ್ಯವಿರುವುದಿಲ್ಲ ತನ್ನ ಸಾಮರ್ಥ್ಯದ ಇತಿಮಿತಿಗಳನ್ನ ಅರಿತು ಅವುಗಳನ್ನು ವೃದ್ಧಿಸಿಕೊಳ್ಳಲು ಬೇಕಾದಂತಹ ಧೀ ಶಕ್ತಿಯನ್ನು ಬೆಳೆಸಿಕೊಳ್ಳಬೇಕು.

ಇತರರೊಡನೆ ಸರಳವಾಗಿ, ನೇರವಾಗಿ, ಪ್ರಾಮಾಣಿಕವಾಗಿ ಬೆರೆಯುವುದನ್ನು ಅಭ್ಯಸಿಸಬೇಕು. ತನ್ನ ಯಾವುದೇ ಚಟುವಟಿಕೆಯಾದರೂ, ಮೊದಲೇ ಯೋಚಿಸಿ, ವ್ಯವಸ್ಥಿತವಾಗಿ ಯೋಜನೆಗಳನ್ನು ರೂಪಿಸಿಕೊಂಡು ಶಿಸ್ತಿನಿಂದ ಮಾಡಿ ಅದರಿಂದ ಅದು ಹೆಚ್ಚು ಫಲವನ್ನು ಪಡೆಯಬೇಕು.

ಮುಕ್ತ ಅವಕಾಶ ಸಿಕ್ಕಾಗಲೆಲ್ಲ ನಮ್ಮ ತಿಳುವಳಿಕೆಯನ್ನು, ಜ್ಞಾನವನ್ನು ಹೆಚ್ಚಿಸಿಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತಲೇ ಇರಬೇಕು. ವ್ಯಕ್ತಿಯು ತನಗೆ ಯಾವ ಕ್ಷೇತ್ರದಲ್ಲಿ ಅಭಿರುಚಿ ಮತ್ತು ಒಲವು ಇರುತ್ತದೆಯೋ ಆ ಕ್ಷೇತ್ರದಲ್ಲಿಯೇ ತಾನು ಸಾಧನೆ ಮತ್ತು ಕೌಶಲ್ಯ ಅಭಿವೃದ್ಧಿಯನ್ನು ಮಾಡಿದಾಗ ಅದರಿಂದ ಶೀಘ್ರ ಹಾಗು ಉತ್ತಮ ಫಲ ಪ್ರಾಪ್ತಿಯಾಗುತ್ತದೆ.

ತನ್ನ ಶಕ್ತಿ ಮತ್ತು ಯುಕ್ತಿಗೆ ಮೀರಿದ ಕೆಲಸವನ್ನು ಸವಾಲಾಗಿ ಸ್ವೀಕರಿಸಿದರೆ, ಅದರಲ್ಲಿ ನಿಷ್ಣಾತರನ್ನು ಸಂಪರ್ಕಿಸಿ ಅವರ ಅನುಭವದ ಪ್ರಯೋಜನವನ್ನು ಪಡೆಯಬೇಕು.

ಯಾವುದೇ ಕಾರಣಕ್ಕೂ ಮನಸ್ಸು ಆತಂಕ ಮತ್ತು ಖಿನ್ನತೆಯ ಎಡೆಗೆ ವಾಲದೇ ಇರುವಂತೆ ಜಾಗ್ರತೆವಹಿಸಬೇಕು. ಈ ರೀತಿಯ ಮನೋಸ್ಥೈರ್ಯವನ್ನು, ಆತ್ಮವಿಶ್ವಾಸವನ್ನು, ಸಾಧನೆಯ ಗುರಿಯನ್ನು, ಸಾಧಿಸುವ ಛಲವನ್ನು, ಬೆಳೆಸಿಕೊಂಡಾಗ ಕೀಳರಿಮೆಗೆ ನಿಮ್ಮ ವ್ಯಕ್ತಿತ್ವದಲ್ಲಿ ಸ್ಥಾನವೇ ಇರುವುದಿಲ್ಲ. ನಿಮಗೆ ನೀವೇ ಸಮರ್ಥರು, ಗುರಿ ಸಾಧಕರು, ಪ್ರಯತ್ನಶೀಲರು ಎಂಬ ಹೆಗ್ಗಳಿಕೆ ಲಭಿಸುತ್ತದೆ. ಅದರಿಂದ ನಿಮ್ಮ ಕೀಳರಿಮೆ ನಶಿಸಿ ಮೇಲರಿಮೆಯ ಸವಿಯನ್ನು ಸವಿಯಬಲ್ಲಿರಿ.

ಸಾಮಾಜಿಕ ಪರಿಪಕ್ವತೆಗಾಗಿ ಸದಾಕಾಲ ನಿಮ್ಮ ಸಾಮರ್ಥ್ಯದ ಅರಿವು ನಿಮ್ಮೊಳಗೆ ಇರಲಿ. ನಾನು ಈ ಮುಕ್ತ ಪರಿಸರದಲ್ಲಿದ್ದೇನೆ, ಮುಕ್ತ ಅವಕಾಶಗಳಿವೆ, ಅವಕಾಶಗಳನ್ನು ಉಪಯೋಗಿಸಿಕೊಂಡು ಮಹತ್ತರವಾದುದನ್ನು ಸಾಧಿಸುತ್ತೇನೆ ಎಂಬ ಮನೋಬಲ ಮತ್ತು ಧೀಮಂತ ಶಕ್ತಿ ಸದಾಕಾಲ ರೂಡಿಸಿಕೊಳ್ಳುತ್ತಿದ್ದಲ್ಲಿ ವ್ಯಕ್ತಿಯು ತನ್ನಲ್ಲಿರುವ ಪ್ರತಿಭೆಯ ಸಾಮರ್ಥ್ಯದ ಪೂರ್ಣ ಅಥವಾ ಹೆಚ್ಚಿನ ಉಪಯೋಗವನ್ನು ತಾನು ತನ್ನ ಕುಟುಂಬ ಹಾಗೂ ತನ್ನ ಸಮಾಜಕ್ಕೆ ನೀಡಬಲ್ಲನು.



## Radiant Systems

RADIANT SYSTEMS

YASKAWA

**QUALITY PRODUCTS, TIMELY SERVICE**

RADIANT SYSTEMS, Authorized Business Partner of YASKAWA India Pvt Ltd for Karnataka region. We deal mainly with products related to Automation and Process Industries.

1) AC Drives, Servo Motor/Drives & Robotics.
2) Panel Engineering Solutions.
3) YASKAWA Solar Pump Controller with Built In MPPT.
4) Retrofit of Existing panels & PCC/MCC Panels.




**#695, 15th Cross, JP Nagar, 2nd Phase, Bangalore-560078**

**Mobile: +91 7760277175 Email: radiantspl@gmail.com**

## QUALITY INDUSTRIES

Specializing in the manufacturing of DPC aluminum wires and strips, our state-of-the-art facilities ensure precision and adherence to the highest industry standards. Beyond manufacturing excellence, we excel in the repair and reconditioning of distribution transformers, ranging from 15 KVA to 1000 KVA capacities

# D60/69 KSSIDC Industrial Estate Veerasandra Bengaluru - 560100

+91-9845203607

support@qualityindustries.co.in


www.artikelinox.com
ARTIKEL®
INOX
makes everything better
• STATIC PREPARATION LINE
• COFFEE & BAR LINE
• COOKING EQUIPMENTS
• EXHAUST SYSTEMS
• FISH MARKET LINE
• PASTRY & BAKERY LINE
• PIZZA LINE
• SELF SERVICE LINE
• TROLLEYS
• REFRIGERATION LINE
• IMPORTED EQUIPMENTS
+91 98448 86158
+91 89712 98150
+91-80-2976 6556
info@artikelinox.com
# SPL-26, 2nd Stage,Jigani Industrial Estate,
Anekal Taluk,Jigani, Bengaluru-560105 , India


MAGNA®
Centres for Obesity Diabetes and Endocrinology
Thyroid
Obesity
Growth Disorder
Osteoporosis
12th ANNIVERSARY
Diabetes
PCOS
Dietician
Pituitary Disease
Sexual Problems
Contact : 9945953953 / 9739412608
Sai Manasa Building, #703, 1st Floor, 30th Main, BTM 2nd Stage Next to Kuvempu Nagar Bus Depot, Bengaluru - 560076.
Scan the QR Code to visit Our Website